**ಮಧ್ಯಕಾಲೀನ ಅರ್ಜಿ ಸಂಖ್ಯೆ: 6 ಮತ್ತು 7 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ: 27-06-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಚ್ಚುವರಿ ಮುಖ್ಯ ವಿಚಾರಣೆ :- ತಕರಾರುದಾರರ ಪರ ವಕೀಲರಾದ ಶ್ರೀ.ಎಂ.ಗಿರೀಶ್ ರವರಿಂದ:**

ದಾವಾ ಜಮೀನನ್ನು ಮಾರಾಟ ಮಾಡಿದ ಬಗ್ಗೆ ಸೈಯದ್ ಸರ್ದಾರ ರವರು ನನ್ನ ಪರವಾಗಿ ಬರೆದುಕೊಟ್ಟಿರುವ ನೋಂದಾಯಿತ ಖರೀದಿ ಪತ್ರದ ಮೂಲ ಪ್ರತಿಯನ್ನು ಹಾಜರು ಮಾಡಿರುತ್ತೇನೆ. ಸದರಿ ದಾಖಲೆಯನ್ನು **ನಿಪಿ-12 ಎಂದು ಗುರುತಿಸಲಾಯಿತು**. ಆದ್ದರಿಂದ ಅಮಲ್ಜಾರಿ ಅರ್ಜಿಯನ್ನು ವಜಾ ಮಾಡುವಂತೆ ಕೇಳಿಕೊಳ್ಳುತ್ತೇನೆ.

**ಮುಂದುವರೆದ ಪಾಟೀ ಸವಾಲು :- ಡಿ.ಹೆಚ್.ಆರ್. ಪರ ವಕೀಲರಾದ ಶ್ರೀ.ಕೆ. ಎ. ಷರೀಫ್ ರವರಿಂದ:**

ಲೇಟ್ ಇಬ್ರಾಹಿಂ ಸಾಬ್ ರವರ ಹೆಂಡತಿ ಮತ್ತು ಮಕ್ಕಳು ಸರ್ವೆ ನಂ.35/2 ರಲ್ಲಿನ 01-00 ಎಕರೆಗಿಂತ ಹೆಚ್ಚಿನ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಮಾತ್ರ ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗದ ಪ್ರಕಾರ ಲೇಟ್ ಇಬ್ರಾಹಿಂ ಸಾಬ್ ರವರ ಮಗನಾದ ಸರ್ದಾರನಿಗೆ 00-15 ಗುಂಟೆ ಹೋಗಿರುತ್ತದೆ. ಇತರೆ ಇಬ್ಬರು ಮಕ್ಕಳು ಮತ್ತು ಹೆಂಡತಿಗೆ ಎಷ್ಟು ಹೋಗಿದೆ ಎನ್ನುವುದು ಗೊತ್ತಿಲ್ಲ.

ಲೇಟ್ ಇಬ್ರಾಹಿಂ ಸಾಬ್ ರವರ ಹೆಂಡತಿ ಮತ್ತು ಮಕ್ಕಳ ನಡುವೆ ಆಗಿರುವ ವಿಭಾಗಕ್ಕೆ ಸಂಬಂಧಿಸಿದ ವಿಭಾಗದ ಮೂಲ ಪತ್ರವನ್ನು ಹಾಜರು ಮಾಡಿದ್ದೇನೆ. ಸದರಿ ವಿಭಾಗ ಪತ್ರವನ್ನು ನಾನು ನೋಡಿದ್ದು, ಅದು ನೋಂದಣಿಯಾಗಿರುತ್ತದೆ. ನಾನು ಖರೀದಿ ಮಾಡಿದ ಜಮೀನಿನ ಖರೀದಿ ಪತ್ರವನ್ನು ಸರ್ದಾರ್ ಮಾತ್ರ ಬರೆದುಕೊಟ್ಟಿರುತ್ತಾರೆ. ಸರ್ದಾರ್ ರವರು ಈಗಲೂ ಬದುಕಿರುತ್ತಾರೆ. ಅವರು ಮತ್ತು ನನ್ನ ನಡುವಿನ ಸಂಬಂಧ ಚೆನ್ನಾಗಿಯೇ ಇರುತ್ತದೆ. ಸರ್ದಾರ್ ರವರು ಲೇಟ್ ಇಬ್ರಾಹಿಂ ಸಾಬ್ ರವರ ಮಗ ಎನ್ನುವುದನ್ನು ತೋರಿಸಲು ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ದಾವಾ ಜಮೀನಿನ ಮೇಲೆ ಸರ್ದಾರ್ ರವರಿಗೆ ಯಾವುದೇ ಹಕ್ಕು, ಹಿತಾಸಕ್ತಿ ಮತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಸರ್ದಾರ್ ರವರು ಲೇಟ್

ಇಬ್ರಾಹಿಂ ಸಾಬ್ ಮತ್ತು ಫಾತೀಮಾ ರವರ ಮಗ ಅಲ್ಲ ಎಂದರೆ ಸರಿಯಲ್ಲ. ಲೇಟ್ ಇಬ್ರಾಹಿಂ ಸಾಬ್ ಮತ್ತು ಫಾತೀಮಾ ರವರಿಗೆ ಅಮೀರ್ ಎನ್ನುವ ಒಬ್ಬನೇ ಮಗ ಎಂದರೆ ಸರಿಯಲ್ಲ. ಸಯ್ಯದ್ ಅಮೀರ್ ರವರು ಸರ್ದಾರ್ ರವರ ಜೊತೆ ಸೇರಿಕೊಂಡು ಡಿ.ಹೆಚ್.ಆರ್. ರವರಿಗೆ ಮೋಸ ಮಾಡುವ ಉದ್ದೇಶದಿಂದ ವಿಭಾಗ ಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಜಮೀನಿನ ಪೈಕಿ 00-15 ಗುಂಟೆಯನ್ನು ನನಗೆ ಮಾರಾಟ ಮಾಡಲು ಸರ್ದಾರ್ ರವರಿಗೆ ಯಾವುದೇ ಹಕ್ಕು ಅಥವಾ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನ ಪೈಕಿ 00-15 ಗುಂಟೆ ವಿಸ್ತೀರ್ಣದಲ್ಲಿ ನಾನು ಸ್ವಾಧೀನದಲ್ಲಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೈಕಿ 00-15 ಗುಂಟೆ ವಿಸ್ತೀರ್ಣವನ್ನು ಎತ್ತಿ ಹಾಕುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಹಾಜರು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**